# ಡಾ. ಬಿ.ಎಂ. ಉಮೇಶ್ ಕುಮಾರ್ । ಕಿರು ಪರಿಚಯ

-----------------------------------------------

ಬಹುಮುಖ ಪ್ರತಿಭೆ ಡಾ. ಬಿ.ಎಂ. ಉಮೇಶ್ ಕುಮಾರ್ ಅವರು ನಮ್ಮೊಡನಿರುವ ಬಹಳ ಅಪರೂಪದ ಯುವ ಸಾಧಕರು. ಉದ್ಯಮಿ, ಸಹಕಾರಿ ಧುರೀಣ, ಉದಯೋನ್ಮುಖ ರಾಜಕೀಯ ಮುಖಂಡ, ಕಲೆ-ಕ್ರೀಡೆ-ಸಂಸ್ಕೃತಿ ಪೋಷಕ, ಸಾಮಾಜಿಕ ಸೇವಾಕರ್ತ, ವಿಶ್ವಕರ್ಮ ಸಮಾಜದ ರಾಜ್ಯಮುಖಂಡ – ಹೀಗೆ ಉಮೇಶ್ ಕುಮಾರ್ ಅವರ ಕಾರ್ಯಕ್ಷೇತ್ರದ ವಿಸ್ತಾರ ಬಹಳ ದೊಡ್ಡದು.

- ಅತ್ಯಂತ ಚಿಕ್ಕ ವಯಸ್ಸಿನಲ್ಲಿಯೇ ಕ್ರಿಯೇಟಿವ್ ಡಿವೈಸಸ್ ಎನ್ನುವ ಲಿಫ್ಟ್ ತಯಾರಿಕಾ ಕಂಪನಿಯನ್ನು ಸ್ಥಾಪಿಸಿ ಯಶಸ್ವಿಯಾದ ನಂತರ ಉಮೇಶ್ ಅವರು ಎಲಿವೇಟರ್ ಟ್ರೇಡ್ ಸೆಂಟರ್, ಕರ್ನಾಟಕ ಹೈಡ್ರಾಲಿಕ್ ಮತ್ತು ಎಲಿವೇಟರ್ ತಯಾರಕರ ಒಕ್ಕೂಟ, ಎಲ್.ಪಿ.ಜಿ. ಅಟೋ ಗ್ಯಾಸ್ ಕೇಂದ್ರ, ಅಕ್ಷಯ ಡೆವಲಪ್ಪರ್ಸ್ ಮುಂತಾದ ಸಂಸ್ಥೆಗಳ ಮೂಲಕ ಉದ್ಯಮ ಕ್ಷೇತ್ರದಲ್ಲಿ ಯಶಸ್ಸಿನ ಮೆಟ್ಟಿಲುಗಳನ್ನು ಹತ್ತಿದರು.
- ಸಹಕಾರ ಕ್ಷೇತ್ರದಲ್ಲೂ ತಮ್ಮ ವಿಶೇಷ ಛಾಪು ಮೂಡಿಸಿರುವ ಉಮೇಶ್ ಕುಮಾರ್ ಅವರು ಗ್ಲೋಬಲ್ ಸಿಟಿ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ ಎನ್ನುವ ಸಹಕಾರ ಸಂಸ್ಥೆಯನ್ನು ಸ್ಥಾಪಿಸಿ, ಇಂದಿಗೂ ಅದರ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.
- ತಮ್ಮ ಸಮಾಜಮುಖಿ ಕೆಲಸ ಕಾರ್ಯಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಕೈಗೊಳ್ಳಲು ಅನುವಾಗುವಂತೆ ಜಾತ್ಯತೀತ ಜನತಾದಳ ಪಕ್ಷವನ್ನು ಸೇರಿರುವ ಉಮೇಶ್ ಕುಮಾರ್ ಅವರು ಮೊದಲು ಕರ್ನಾಟಕ ಕೈಗಾರಿಕಾ ಮತ್ತು ಉದ್ಯಮಿಗಳ ಘಟಕದ ರಾಜ್ಯಾಧ್ಯಕ್ಷರಾಗಿ ಸೇವೆ ಸಲ್ಲಿಸಿ ಈಗ ಸತತ ಎರಡನೇ ಅವಧಿಗೆ ಜೆ.ಡಿ.ಎಸ್. ರಾಜ್ಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.
- ತಾವು ಪ್ರತಿನಿಧಿಸುವ ವಿಶ್ವಕರ್ಮ ಸಮುದಾಯದ ಏಳಿಗೆಗಾಗಿ 'ಶ್ರೀ ವಿಶ್ವಕರ್ಮ ಸೇವಾ ಪ್ರತಿಷ್ಠಾನ' ಎನ್ನುವ ಸೇವಾ ಸಂಸ್ಥೆಯನ್ನು ಸ್ಥಾಪಿಸಿ ಪ್ರತಿ ವರ್ಷ ರಾಜ್ಯಮಟ್ಟದ ವಿಶ್ವಕರ್ಮ ಮಹೋತ್ಸವ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭಗಳನ್ನು ಆಯೋಜಿಸುವುದರ ಮೂಲಕ ನಿರಂತರವಾಗಿ ಸಮುದಾಯ ಸೇವಾ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.
- 116 ಗಣ್ಯ ಸಾಧಕರನ್ನು ಒಂದೇ ವೇದಿಕೆಯ ಮೇಲೆ ಸನ್ಮಾನಿಸಿದ "ಪಂಚ ಕಲಾ ವೈಭವ" ಆಯೋಜನೆ, ಶ್ರೀಗುರು ದಕ್ಷಿಣಾಮೂರ್ತಿ, ಶ್ರೀ ಭಗವಾನ್ ವಿಶ್ವಕರ್ಮ ಹಾಗೂ ಅಯೋಧ್ಯೆಯ ಬಾಲರಾಮನ ಭಕ್ತಿ ಗೀತೆಗಳ ಆಡಿಯೋ ಸಿಡಿ ನಿರ್ಮಾಣ, ಇತ್ಯಾದಿ ಕೆಲಸಗಳ ಮೂಲಕ ಅತ್ಯುತ್ತಮ ಕಲಾ ಪೋಷಕರಾಗಿ ಉಮೇಶ್ ಕುಮಾರ್ ಅವರು ಗುರುತಿಸಿಕೊಂಡಿದ್ದಾರೆ.
- ಉಮೇಶ್ ಕುಮಾರ ಅವರ ಸಾಮಾಜಿಕ ಸೇವೆಯ ಆಳ ಹಾಗೂ ಅಗಲ ಬಹಳ ದೊಡ್ಡದು. ಅವುಗಳನ್ನು ಕೆಲವನ್ನು ಗಮನಿಸುವುದಾದರೆ : ಲಿಫ್ಟ್ ಅವಘಡದ ಸಂದರ್ಭದಲ್ಲಿ ತುರ್ತು ಸೇವೆಗಾಗಿ ಎಲಿವೇಟರ್ ರೆಸ್ಕ್ಯೂ ವೆಹಿಕಲ್ ಜನರಿಗೆ ಅರ್ಪಣೆ, ಅಗ್ನಿಶಾಮಕ ಸಿಬ್ಬಂದಿಗಳಿಗೆ ರೆಸ್ಕ್ಯೂ ವಿಧಾನಗಳ ಬಗ್ಗೆ ತರಬೇತಿ, 'ಕಾರ್ಮಿಕ ಬಂಧು' ಯೋಜನೆ, ಉಚಿತ ಸಂಚಾರಿ ಅಂಬ್ಯುಲೆನ್ಸ್ ಸಮಾಜಕ್ಕೆ ಸಮರ್ಪಣೆ, ಕೊರೋನಾ ಪರಿಹಾರ ಕಾರ್ಯಗಳು, ಉತ್ತರ ಕರ್ನಾಟಕ ಹಾಗೂ ಕೊಡಗು ನೆರೆಹಾವಳಿ ಸಂದರ್ಭದಲ್ಲಿ ನೆರವು, ಇತ್ಯಾದಿ.
- ಡಾ. ಉಮೇಶ್ ಕುಮಾರ್ ಅವರು ಬೆಂಗಳೂರು ಜಯನಗರ ಲಯನ್ಸ್ ಕ್ಲಬ್‌ನಲ್ಲಿ ಡಿಸ್ಟ್ರಿಕ್ಟ್ ಚೇರ್ ಪರ್ಸನ್, ಚಾರ್ಟರ್ಡ್ ಸೆಕ್ರೆಟರಿ, ಖಜಾಂಚಿ, ಅಧ್ಯಕ್ಷ ಇತ್ಯಾದಿ ಹಲವು ಉನ್ನತ ಜವಾಬ್ದಾರಿಗಳನ್ನು ನಿಭಾಯಿಸಿ, ಅತ್ಯುತ್ತಮ ಮಾನವೀಯ ಸೇವೆಗಳನ್ನು ಸಲ್ಲಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದವೆಂದರೆ :

‘ಮಾದಕ ವಸ್ತು ಬೇಡ ಎನ್ನಿರಿ’ ಅಭಿಯಾನ, ನೇಪಾಳ ದುರಂತಕ್ಕಾಗಿ ದೇಣಿಗೆ ಸಂಗ್ರಹ, ನೇತ್ರ ತಪಾಸಣೆ, ನೇತ್ರ ಶಸ್ತ್ರ ಚಿಕಿತ್ಸೆ, ಆರೋಗ್ಯ ಶಿಬಿರಗಳ ಆಯೋಜನೆ, ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿಗಳ ಶುಲ್ಕ ಪಾವತಿ, ಅರ್ಹ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್, ಕಂಪ್ಯೂಟರ್, ಪುಸ್ತಕಗಳ ವಿತರಣೆ ಮೂಲಕ ಶಿಕ್ಷಣಕ್ಕೆ ಪ್ರೋತ್ಸಾಹ ಇತ್ಯಾದಿ.

- ಸ್ವತಃ ಕ್ರೀಡಾಪಟು ಹಾಗೂ ಕ್ರೀಡಾ ಪೋಷಕರಾಗಿರುವ ಉಮೇಶ್ ಕುಮಾರ್ ಅವರು ಮಾಧ್ಯಮದವರ ಕ್ರೀಡಾಸಕ್ತಿಯನ್ನು ಪ್ರೋತ್ಸಾಹಿಸಲು ‘ಕ್ರಿಯೇಟಿವ್ ಮೀಡಿಯಾ ಕಪ್’ನ್ನು ಪ್ರತಿವರ್ಷ ಆಯೋಜನೆ ಮಾಡುತ್ತಿದ್ದಾರೆ.
- ಡಾ. ಉಮೇಶ್ ಕುಮಾರ್ ಅವರ ಸಾಧನೆಯು ಸುಮಾರು ೩೦ಕ್ಕೂ ಹೆಚ್ಚು ಪ್ರತಿಷ್ಠಿತ ಪ್ರಶಸ್ತಿಗಳಿಂದ ಶೃಂಗಾರಗೊಂಡಿದೆ. ಕರ್ನಾಟಕ ಸರ್ಕಾರದ “ಸಹಕಾರ ರತ್ನ” ಪ್ರಶಸ್ತಿ, ಕೊಲಂಬೋ ಯುನಿವರ್ಸಿಟಿಯಿಂದ ಗೌರವ ಡಾಕ್ಟರೇಟ್, ಬಿಬಿಎಂಪಿಯಿಂದ ಕೆಂಪೇಗೌಡ ಪ್ರಶಸ್ತಿ, ವಿಶ್ವಕರ್ಮ ನಾಡೋಜ ಗೌರವ, ಕೈಗಾರಿಕಾ ರತ್ನ ಗೌರವ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಆರ್ಯಭಟ ಅಂತಾರಾಷ್ಟ್ರೀಯ ಪ್ರಶಸ್ತಿ, ಅಸೋಚಾಮ್‌ನಿಂದ ‘ಉದಯೋನ್ಮುಖ ಉದ್ಯಮಿ’ ಪ್ರಶಸ್ತಿ – ಹೀಗೆ ಉಮೇಶ್ ಕುಮಾರ್ ಅವರ ಹೆಸರಿನ ಜೊತೆ ಪ್ರಶಸ್ತಿಗಳ ದೊಡ್ಡ ಪಟ್ಟಿಯೇ ಇದೆ.

ಇವೆಲ್ಲಕ್ಕಿಂತ ಡಾ.ಬಿ.ಎಂ. ಉಮೇಶ್ ಕುಮಾರ್ ಅವರು ಗಳಿಸಿದ ಅತಿ ದೊಡ್ಡ ಪ್ರಶಸ್ತಿಯೆಂದರೆ ಲಕ್ಷಾಂತರ ಜನರ ಪ್ರೀತಿ, ವಿಶ್ವಾಸ ಹಾಗೂ ಗೌರವ.

------------------------